ಕರ್ನಾಟಕ ವಿಧಾನ ಸಭೆ

99 ಶ್ರೀ ಜಯಚಂದ್ರ ಟಿ.ಬಿ.
ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

1. ಅಡಿಕೆ ಮತ್ತು ಕೊಬ್ಬರಿಯ ಬೆಲೆ ಕುಸಿತದಿಂದ ಅಡಿಕೆ ಮತ್ತು ತೆಂಗು ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿ ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

2. ಹಾಗಿದ್ದಲ್ಲಿ. ಈ ಬಗ್ಗೆ ಸರ್ಕಾರದ ಕ್ರಮವೇನು;

ಭಾರತ ಸರ್ಕಾರ ಘೋಷಿಸಿದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಅಡಿಕೆ ಸೇರ್ಪಡೆಯಾಗದ ಕಾರಣ, ಮಾರುಕಟ್ಟೆ ಮಧ್ಯಪ್ರದೇಶ ಯೋಕನೆಯಡಿ ಅಡಿಕೆಯನ್ನು ಖರೀದಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ತೋಟಗಾರಿಕೆ ಇಲಾಖೆಯು ದಿನಾಂಕ:17/01/2009ರಂದು ಕಳುಹಿಸಿದೆ. ಅವರಿಂದ ಮಂಜೂರಾತಿಯನ್ನು ನಿರೀಕ್ಷಿಸಲಾಗುತ್ತಿದೆ.

ಕೊಬ್ಬರಿಗೆ ಸಂಬಂಧಿಸಿದಂತೆ 2008–09ನೇ ಸಾಲಿನಲ್ಲಿ ಪ್ರತಿ ಕ್ವಿಂಟಾಲ್ ಉಂಡೆ ಕೊಬ್ಬರಿಗೆ ರೂ.6120/– ಗಳಿಗೆ ಬೆಂಬಲ ಬೆಲೆ ನಿಗಧಿಪಡಿಸಲು ಆಯುಕ್ತರು, ಕೃಷಿ ಬೆಲೆ ನಿಗದೀಕರಣ. ನವದೆಹಲಿ ಇವರಿಗೆ ದಿನಾಂಕ:30/10/2008 ರಂದು ಪ್ರಸ್ತಾವನೆ ಸಲ್ಲಿಸಲಾಗಿದೆ.

3. ರೈತರ ಹಿತದೃಷ್ಟಿಯಿಂದ ಕೂಡಲೇ ಸರ್ಕಾರ ಮಧ್ಯಪ್ರವೇಶಿಸಿ ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸುವುದೇ; ಈ ಬಗ್ಗೆ ಸರ್ಕಾರದ ನಿಲುವೇನು?

ರಾಜ್ಯದಲ್ಲಿ ರೈತ ಹಿತದೃಷಿಯಿಂದ ಅಡಿಕೆಯ ಉತ್ಪಾದನಾ ವೆಚ್ಚವನ್ನಾಧರಿಸಿ ತೋಟಗಾರಿಕಾ ನಿರ್ದೇಶನಾಲಯವು ಚಾಲಿ ಪ್ರಭೇದದ ಅಡಿಕೆಗೆ ಪ್ರತಿ ಕ್ವಿಗೆ ರೂ.8,100/– ಹಾಗೂ ಕೆಂಪು ಪ್ರಭೇದದ ಅಡಿಕೆಗೆ ಪ್ರತಿ ಕ್ವಿಗೆ ರೂ.10,900/– ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರಕ್ಕೆ ದಿನಾಂಕ:17/01/2009 ರಂದು ಶಿಫಾರಸ್ಸು ಮಾಡಿದ್ದು. ಕೇಂದ್ರ ಸರ್ಕಾರದಿಂದ ಮಾಹಿತಿ ನಿರೀಕ್ಷಿಸಲಾಗಿದೆ.

ಪ್ರಸ್ತುತ ಕೊಬ್ಬರಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರವು ಎಣ್ಣೆ ಕೊಬ್ಬರಿಗೆ ರೂ.3,600/– ಗಳನ್ನು ಹಾಗೂ ಉಂಡೆ ಕೊಬ್ಬರಿಗೆ ರೂ.3,910/– ಗಳ ಬೆಂಬಲ ಬೆಲೆ ನಿಗದಿಪಡಿಸಿರುತ್ತದೆ. 2009ನೇ ಸಾಲಿಗೆ ಕೇಂದ್ರ ಸರ್ಕಾರವು ಈ ಬೆಲೆಯನ್ನು ಪರಿಷ್ಕರಿಸುವುದನ್ನು ನಿರೀಕ್ಷಿಸಲಾಗಿದೆ.

ಸಗಟು ಮಾರುಕಟ್ಟೆಯಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರವು ಘೋಷಿಸುವ ಬೆಂಬಲ ಬೆಲೆಗಿಂತ ಮಾರಾಟವಾದಲ್ಲಿ ರೈತರ ಹಿತದೃಷ್ಟಯಿಂದ

ಕನಿಷ್ಟ ಬೆಂಬಲ ಬೆಲೆ / ಮಾರುಕಟ್ಟೆ ಮಧ್ಯಪ್ರದೇಶ ಯೋಜನೆಯಡಿ ರೈತರಿಂದ ಖರೀದಿಸಲು ಕ್ರಮ ಜರುಗಿಸಲಾಗುವುದು.
ಸಂಖ್ಯೆ. ಕಜಾ ಕ ಎಂಆರ್‌ಇ 2009

ಸಹಿ/–
(ಶಿವರಾಜ್ ಎಸ್.ತಂಗಡಗಿ)
ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

(ಸಿ.ಕೆ ವಾಸುದೇವ ಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

ಕರ್ನಾಟಕ ವಿಧಾನ ಸಭೆ

100 ಶ್ರೀ ಜಯಚಂದ್ರ ಟಿ.ಬಿ. (ಶಿರಾ)
ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು

ಅ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕು ಚಿಕ್ಕನಹಳ್ಳಿಯಲ್ಲಿ ಸಾಂಪ್ರದಾಯಕ ಪುಷ್ಪಗಳ ಹರಾಜು ಕೇಂದ್ರ ಸ್ಥಾಪನೆಗೆ ಸರ್ಕಾರ ಉದ್ದೇಶಿಸಿದೆಯೇ;

ಹೌದು.

ಆ. ಈ ದಿಸೆಯಲ್ಲಿ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು; ಇದರ ಅನುಷ್ಠಾನ ಕಾರ್ಯಕ್ರಮ ಯಾವ ಹಂತದಲ್ಲಿದೆ?

ರೂ.200.00 ಲಕ್ಷಗಳು

ಎರಡು ಎಕರೆ ಜಮೀನನ್ನು ಕೃಷಿ ಇಲಾಖೆಯಿಂದ ಪಡೆಯಲಾಗಿದೆ. ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಸಿದ್ಧತೆಯ ಹಂತದಲ್ಲಿದೆ.

ತೋಟಗಾರಿಕೆ ಮತ್ತು ಬಂದಿಖಾನೆ ಸಚಿವರು.